## Damage of bridge on K. T. Road in Turuvekere Taluk

668 SRI K. H. RAMAKRISHNAIAH (Turuvekere).–Will the Minister for Public Works be pleased to state :—

(a) whether breakage of a bridge in K. T. Road, Turuvekere Taluk has come to the notice of the Government, if so, when it has broken :

(b) number of persons who died due to accident at the deviation of the same road ;

(c) whether Government has taken any action regarding construction of a bridge ?

SRI KAGODU THIMMAPPA (Minister for Public Works).—

(a) Yes.

(b) 5 Persons died due to Lorry accident which took place on the night of 6/7th November, 1981 at the deviation road.

(c) Government has taken action to construct a new bridge.

ಶ್ರೀ ಕೆ. ಹೆಚ್. ರಾಮಕೃಷ್ಣಯ್ಯ.—ನಾನು ಕೇಳಿದ ಪ್ರಶ್ನೆಗೆ ಸರ್ಕಾರದಿಂದ ಸರಿಯಾದ ಉತ್ತರ ಬಂದಿಲ್ಲ. ಯಾವಾಗ ಸೇತುವೆ ಒಡೆದಿದೆ ಎಂದು ಕೇಳಿದ್ದರೆ ಅದಕ್ಕೆ 'ಬಂದಿದೆ' ಎಂದು ಹೇಳಿದ್ದಾರೆ. ನಾನು ಪ್ರಶ್ನೆ ಮಂಖೀನ ಸದರಿ ವಿಷಯನ್ನು ಸರ್ಕಾರದ ಗಮನಕ್ಕೆ ತಂದಿದ್ದರೂ ದುರಸ್ತಿ ಕ್ರಮವನ್ನು ತೆಗೆದುಕೊಳ್ಳದಿರುವುದರಿಂದ ಮೊನ್ನೆ ನಡೆದ ಅಪಘಾತದಲ್ಲಿ ೫ ಜನ ಪ್ರಾಣ ನೀಗಿದ್ದಾರೆ. ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂಬ ಬಗ್ಗೆ ಕೂಡ ಖಚಿತ ಉತ್ತರ ಕೊಟ್ಟಿಲ್ಲ. ಆ ಸೇತುವೆಯ ದುರಸ್ತಿ ಕಾರ್ಯವನ್ನು ಯಾವಾಗ ಕೈಗೊಳ್ಳುತ್ತೀರೆಂದು ಕೇಳಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಆ ಸೇತುವೆಯಲ್ಲಿ ಕ್ರಾಕ್ ಆಗಿದೆ ಎಂಬುದು ೨೩-೭-೧೯೮೧ರಲ್ಲಿ ಸರ್ಕಾರದ ಗಮನಕ್ಕೆ ಬಂತು. ತದನಂತರ ಡೀವಿಯೇಷನ್ ಮಾಡಿ ಸೇತುವೆ ನಿರ್ಮಾಣಕ್ಕೆ ಮಂಜೂರಾತಿ ನೀಡಿ ಈಗಾಗಲೇ ನಾವು ಟೆಂಡರ್ ಕೂಡ ಕರೆದಿದ್ದೇವೆ.

ಶ್ರೀ ಕೆ. ಹೆಚ್. ರಾಮಕೃಷ್ಣಯ್ಯ.—ಮಾನ್ಯ ಅಧ್ಯಕ್ಷರೇ, ಎರಡು ವರುಷಗಳಿಂದ ಈ ದುರಂತ ನಡೆಯುತ್ತಿದ್ದು ಈಗಾಗಲೇ ೫ ಜನ ಪ್ರಾಣ ನೀಗಿದ್ದಾರೆ. ಡೀವಿಯೇಷನ್ ರಸ್ತೆಯಲ್ಲಿ ಇನ್ನೂ ದುರಂತ ಗಳಾಗತಕ್ಕ ಸಂದರ್ಭ ಇದೆ. ಹೀಗಿದ್ದರೂ ಟೆಂಡರ್ ಕರೆಯುತ್ತೇವೆ, ಮಾಡಿಸುತ್ತೇವೆ ಎಂದು ಮಾನ್ಯ ಮಂತ್ರಿಯವರು ಉತ್ತರ ಕೊಡುತ್ತಿದ್ದಾರೆ. ಸರ್ಕಾರದ ಪೇಳಿಕೆಗಳು ಬರೀ ಕಾಗದದಲ್ಲಿ ಇರುತ್ತದೆಯೊ ಆಥವಾ ಕಾರ್ಯರೂಪಕ್ಕೆ ತರುವ ಪ್ರಯತ್ನ ನಡೆಯುತ್ತದೆಯೋ ಎಂಬ ಬಗ್ಗೆ ಮಾನ್ಯ ಮಂತ್ರಿಯವರು ಭರವಸೆ ನೀಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ ಈ ಬಗ್ಗೆ ಮಾನ್ಯ ಸದಸ್ಯರಿಗೆ ವಿವರ ಗೊತ್ತಿಲ್ಲ ಎಂದು ಕಾಣುತ್ತದೆ. ಸುಮಾರು ೧೧.೬೦ ಲಕ್ಷ ರೂಪಾಯಿಗಳು ಈ ಕೆಲಸಕ್ಕೆ ಖರ್ಚಾಗುತ್ತದೆ. ಈ ಕೆಲಸದ ಅಗತ್ಯತೆ ಗೊತ್ತಾದಕೂಡಲೇ ಡೀವಿಯೇಷನ್ ರಸ್ತೆ ಮಾಡಿ ಬಜೆಟ್‌ನಲ್ಲಿ ಹಣ ಒದಗಿಸದಿದ್ದರೂ ಕೂಡ ವಿಶೇಷವಾಗಿ ಪ್ಲಾನ್ ಮತ್ತು ಎಸ್ಟಿಮೇಟ್ ಮಾಡಿ ಮಂಜೂರಾತಿ ಕೊಟ್ಟಿದ್ದೇವೆ. ೧೧-೧೧-೧೯೮೧ರಲ್ಲಿ ಇದಕ್ಕೆ ಆಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಕೂಡ ನಾವು ಕೊಟ್ಟಿದ್ದೇವೆ. ಈಗ ಟೆಂಡರ್ ಕರೆದಿದ್ದೇವೆ. ಇದು ಆಕ್ಸೆಪ್ಟ್ ಆದಮೇಲೆ ನಾವು ಮುಂದಿನ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎನ್. ಬಸವಯ್ಯ.—ಈ ಸೇತುವೆ ದುರಸ್ತಿ ಮಾಡುವುದಕ್ಕೋಸ್ಕರ ಡೀವಿಯೋಷನ್ ರಸ್ತೆ ಮಾಡಿದರು. ಈ ಡೀವಿಯೇಷನ್ ರಸ್ತೆಯಲ್ಲಿ ಅಪಘಾತವಾಗುತ್ತಿದೆ. ಆವತ್ತಿನಿಂದ ಇವತ್ತಿನವರೆಗೆ ಸರ್ಕಾರದವರು ಟೆಂಡರ್ ಕರೆದಿದ್ದೇವೆಂದು ಹೇಳುತ್ತಿದ್ದಾರೆ. ಇಲಾಖೆಯವರು ಡೀವಿಯೇಷನ್

ರಸ್ತೆಯನ್ನು ಸರಿಯಾಗಿ ಮಾಡದೆ ನಿರ್ಲಕ್ಷ್ಯದಿಂದ ಕೆಲಸ ಮಾಡಿರುವುದರಿಂದ ಅನೇಕ ಜನ ನಿರಪರಾಧಿಗಳು ಸತ್ತಿದ್ದಾರೆ. ಈ ರೀತಿ ನಿರ್ಲಕ್ಷ್ಯ ವಹಿಸಿ ಕೆಲಸ ಮಾಡಿದ ಅಧಿಕಾರಿಗಳ ಮೇಲೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಇಲಾಖೆಯವರ ನಿರ್ಲಕ್ಷ್ಯದಿಂದ ಅಪಘಾತ ವಾಗಿದೆ ಎಂಬ ಮಾತು ಸರಿಯಾದುದಲ್ಲ. ಮಾಸ್ತಿ ಕವಾಗಿ ಡ್ರೈವರ್ ನಿರ್ಲಕ್ಷ್ಯದಿಂದ ಅಪಘಾತವಾಗಿದೆ. ಯಾರದೋ ತಪ್ಪಿಗೆ ಯಾರಿಗೋ ಬರೆ ಹಾಕುವುದಕ್ಕಾಗುವುದಿಲ್ಲ. ಕೆಲಸ ಬೇಗ ಆಗಬೇಕೆಂಬ ದೃಷ್ಟಿಯಿಂದ ಬಜೆಟ್ಟಿನಲ್ಲಿ ಹಣ ಒದಗಿಸಿಲ್ಲದಿದ್ದರೂ ಮಂಜೂರಾತಿ ಕೊಟ್ಟು ನಾವು ಟೆಂಡರ್ ಕರೆದಿದ್ದೇವೆ.

ಶ್ರೀ ಕೆ. ಹೆಚ್. ರಾಮಕೃಷ್ಣಯ್ಯ.—ಶಿವಮೊಗ್ಗ ಮತ್ತು ತಿಪಟೂರು ಕಡೆಯಿಂದ ಮೈಸೂರಿಗೆ ಹೋಗತಕ್ಕ ರಸ್ತೆಯಲ್ಲಿರುವ ಈ ಸೇತುವೆ ಹೆಚ್ಚು ಪಳೆಯಾದ ಪ್ರಯುಕ್ತ ಒಡೆದುಹೋಗಿ ಸಂಪರ್ಕ ವ್ಯವಸ್ಥೆ ಸ್ಥಗಿತವಾಗಿತ್ತು. ಡೀವಿಯೇಷನ್ ರಸ್ತೆ ಮಾಡಿರುವುದು ಬಹಳ ಕಿರಿದಾಗಿರುವುದರಿಂದ ಅಪಘಾತ ನಡೆಯುತ್ತಿದೆ. ಡ್ರೈವರ್ ನಿರ್ಲಕ್ಷ್ಯದಿಂದ ಅಪಘಾತ ಆಗಿಲ್ಲ. ಮಾನ್ಯ ಮಂತ್ರಿಗಳಿಗೆ ಎರಡು ಸಲ ಆ ಸ್ಥಳ ತೋರಿಸಬೇಕೆಂದು ನಾವು ಪ್ರಯತ್ನಪಟ್ಟರೂ ಕೂಡ ಅವರಿಗೆ ಈ ಬಗ್ಗೆ ಸಹಾನು ಭೂತಿ ಬರಲಿಲ್ಲ. ಈಗಲಾದರೂ ಸ್ಥಳ ಪರಿಶೀಲನೆ ಮಾಡಿ ಕೂಡಲೇ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಮೊದಲೇ ಹೇಳಿದಂತೆ ಸೇತುವೆ ದುರಸ್ತಿ ಮಾಡುವುದಕ್ಕೆ ಸರ್ಕಾರ ಗಮನ ಹರಿಸಿದೆ. ಇನ್ನೊಂದು ತೊಂದರೆ ಏನೆಂದರೆ, ಸ್ಥಳ ಪರಿಶೀಲನೆಗೆ ಆ ಕ್ಷೇತ್ರಕ್ಕೆ ಹೋಗುವುದು ಕಷ್ಟವಾಗುತ್ತದೆ. ಈಗ ಟೆಂಡರ್ ಕರೆದಿದ್ದೇವೆ. ಅಗತ್ಯವಿದ್ದರೆ ಅಲ್ಲಿ ಹೋಗಿ ನೋಡೋಣ.

ಶ್ರೀ ಎಂ. ಸಿ. ನಾಣಯ್ಯ.—ಅವರು ಕರೆಯುತ್ತಿದ್ದಾರೆ. ಅವರ ಮನೆಗಾದರೂ ಹೋಗಿ.

ಶ್ರೀ ಕಾಗೋಡು ತಿಮ್ಮಪ್ಪ.—ಅಗತ್ಯವಾಗಿ ಹೋಗೋಣ.

## Land dispute in Sy.No. 167 of Guthalu Village, Mandya Taluk

733. SRI M.S. ATHMANANDA (Mandya).—Will the Chief Minister be pleased to state.—

(a) has it come to the notice of the Government that in spite of Court orders, Sub-Inspector of Police (Rural Station), Mandya Taluk forcibly got harvested the paddy crop raised by Basavaiah in Block No. 4 of Sy.No. 167 of Guthalu Village, Mandya Taluk;

(b) if so, what action the Government proposed to take against the said Sub-Inspector of Police and other accomplices ?

SRI R. GUNDU RAO (Chief Minister).—

(a) No.

(b) Does not arise in view of reply to Clause 'A'.

ಶ್ರೀ ಎಂ. ಎಸ್. ಆತ್ಮಾನಂದ.—ಮಾನ್ಯ ಅಧ್ಯಕ್ಷರೇ, ಮಂಡ್ಯ ತಾಲ್ಲೂಕಿನ ಗುತ್ತಲು ಗ್ರಾಮದ ಬ್ಲಾಕ್ ನಂ. ೪, ಸರ್ವೆ ನಂಬರ್ ೧೬೭ರಲ್ಲಿ ಬಸವಯ್ಯನವರು ಬೆಳೆಸಿದ ಬತ್ತವನ್ನು ನ್ಯಾಯಾಲಯದ ಆದೇಶವಿದ್ದಾಗ್ಯೂ ಪೋಲೀಸರ ಸಹಾಯದಿಂದ ಬೇರೆಯವರು ಕುಯಿಲು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದರೆ ಸರ್ಕಾರದವರು ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದಾರೆ. ಸರ್ವೆ ನಂಬರ್ ೧೬೭ರ ವಿವಾದ ಬಸವಯ್ಯನವರಿಗೂ ಮತ್ತು ಮತ್ತೊಬ್ಬರಿಗೂ ಬಹಳ ದಿವಸದಿಂದ